# ಪ್ರಥಮ ರಾಜ್ಯಮಟ್ಟದ ಮಾನವ ಸಂಪನ್ಮೂಲ ವೃತ್ತಿನಿರತರ ಕನ್ನಡ ಸಮ್ಮೇಳನ 2017

**ನಿರಾತಂಕ,**
**ಸಮಾಜಕಾರ್ಯ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ**
**ಮತ್ತು ಸಮಾಜಕಾರ್ಯದ ಹೆಜ್ಜೆಗಳು**

**ಸಹಯೋಗದೊಂದಿಗೆ**



## ಶ್ರೀಯುತ ಎಂ.ಎಸ್. ರವೀಶ್ ರವರ ಪ್ರಶಸ್ತಿ ಪತ್ರ

**ಶ್ರೀ ಎಂ.ಎಸ್.ರವೀಶ್**ರವರು ಮಾನವ ಸಂಪನ್ಮೂಲ ನಿರ್ವಹಣೆ ಕ್ಷೇತ್ರದಲ್ಲಿ ಕಳೆದ ನಾಲ್ಕು ದಶಕಗಳ ಕಾಲ ಸೇವೆ ಸಲ್ಲಿಸಿರುತ್ತಾರೆ. ಪ್ರತಿಷ್ಠಿತ ಉದ್ಯಮಗಳಲ್ಲಿ ಕಾರ್ಯನಿರ್ವಹಿಸಿದ ಅನುಭವವನ್ನು ಹೊಂದಿರುವ ಶ್ರೀಯುತರು ಕೈಗಾರಿಕಾ ಸಂಬಂಧ, ಸಿಬ್ಬಂದಿ ನಿರ್ವಹಣೆ, ತರಬೇತಿ ಮತ್ತು ಅಭಿವೃದ್ಧಿ ಇವೇ ಮೊದಲಾದ ವಿಷಯಗಳಲ್ಲಿ ಪರಿಣಿತಿಯನ್ನು ಹೊಂದಿರುತ್ತಾರೆ. ಸಾರ್ವಜನಿಕ ಉದ್ಯಮವಾದ ರಾಷ್ಟ್ರೀಯ ಜವಳಿ ನಿಗಮದ ಕೈಗಾರಿಕೆಗಳಲ್ಲಿ ಮತ್ತು ಖಾಸಗಿ ಉದ್ಯಮಗಳಾದ ಅಶೋಕ್ ಐರನ್ ಗ್ರೂಪ್ ಬೆಳಗಾವಿ, ಷಾಪೂರ್‌ಜಿ, ಪಾಲೂನ್‌ಜಿ ಸಮೂಹದ ಗೋಕಾಕ್ ಟೆಕ್ಸ್‌ಟೈಲ್ ಲಿ., ಇತ್ಯಾದಿ ಹೆಸರಾಂತ ಖಾಸಗೀ ರಂಗದ ಉದ್ಯಮೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಮಾನವ ಸಂಪನ್ಮೂಲ ವಿಭಾಗದಲ್ಲಿ ಪ್ರಮುಖವಾಗಿ ಸಂಸ್ಥೆಯ ನೀತಿ – ನಿಯಮ ಮತ್ತು ಕಾರ್ಮಿಕರ ಕೆಲಸ ಕಾರ್ಯಗಳ ವಿಚಾರಗಳಲ್ಲಿ ಸುಧಾರಣೆ ತರಲು ಬಹಳ ಮುಖ್ಯವಾದ ಪಾತ್ರವನ್ನು ವಹಿಸಿರುತ್ತಾರೆ. ತಮ್ಮ ಸಮಾಲೋಚನಾ ಕೌಶಲ್ಯದಿಂದ, ಅಶಾಂತಿಯಿಂದ ಕೂಡಿದ ಕಾರ್ಮಿಕ ಮತ್ತು ಆಡಳಿತ ವರ್ಗದ ಸಂಬಂಧವನ್ನು ಸುಧಾರಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿರುತ್ತಾರೆ. ತಮ್ಮ ಸೇವಾ ಅವಧಿಯಲ್ಲಿ ಕಾರ್ಮಿಕರ ಒಪ್ಪಂದಗಳನ್ನು ಪೂರ್ಣಗೊಳಿಸಿ, ಯಶಸ್ವಿಯಾಗಿ ಅನುಷ್ಠಾನಗೊಳಿಸಿ ಕಾರ್ಮಿಕರ ಮತ್ತು ಕಂಪನಿಯ ಹಿತವನ್ನು ಕಾಪಾಡುವಲ್ಲಿ ಸಹಕಾರಿಯಾಗಿದ್ದಾರೆ.

ಶ್ರೀಯುತರು ಬೆಂಗಳೂರು ವಿಶ್ವವಿದ್ಯಾನಿಲಯದ ಬಿ.ಎ ಹಾಗೂ ಸಮಾಜಕಾರ್ಯ ಸ್ನಾತಕೋತ್ತರ ಪದವಿಯನ್ನು ಪಡೆದಿರುತ್ತಾರೆ. ಇವರು ಬೆಳಗಾವಿಯಲ್ಲಿ ಕಾರ್ಯನಿರ್ವಹಿಸುವ 1998ನೇ ವರ್ಷದ ಸಂದರ್ಭದಲ್ಲಿ ಬೆಳಗಾವಿ ಮತ್ತು ಸುತ್ತಮುತ್ತಲಿನ ಉದ್ಯಮಗಳಲ್ಲಿ ಮಾನವ ಸಂಪನ್ಮೂಲದ ಪ್ರಾಮುಖ್ಯತೆಯನ್ನು ತಿಳಿಸಲು ಮತ್ತು ಎಲ್ಲಾ ಮಾನವ ಸಂಪನ್ಮೂಲ ವೃತ್ತಿನಿರತರನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಲು “ಮಾನವ” ಎಂಬ ಸಂಸ್ಥೆಯನ್ನು ಹುಟ್ಟು ಹಾಕಿದರು. ಈ ಸಂಸ್ಥೆಗೆ ಸದಸ್ಯರಾದ ಉದ್ಯಮಗಳು ಮತ್ತು ಶೈಕ್ಷಣಿಕ ಸಂಸ್ಥೆಗಳ ಮುಖಾಂತರ ಉತ್ತರ ಕರ್ನಾಟಕದಾದ್ಯಂತ ಹಲವಾರು ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ಕಾರ್ಯಾಗಾರಗಳನ್ನು ಆಯೋಜಿಸುವಲ್ಲಿ ಯಶಸ್ವಿಯಾದರು. ಮೊಟ್ಟಮೊದಲ ಬಾರಿಗೆ ಕಾರ್ಮಿಕ ಪ್ರತಿನಿಧಿಗಳ ಮತ್ತು ಆಡಳಿತ ವರ್ಗ ಪ್ರತಿನಿಧಿಗಳ ಸಮಾವೇಶವನ್ನು NIPM ಕರ್ನಾಟಕ chapter ನ ಸಹಯೋಗದೊಂದಿಗೆ ಯಶಸ್ವಿಯಾಗಿ ಆಚಯೋಜಿಸಿದರು. 2001 ರಲ್ಲಿ ನಡೆದ ಈ ಸಮಾವೇಶದ ಹಿಂದೆ ಶ್ರೀಯುತ ಎಂ.ಎಸ್.ರವೀಶ್‌ರವರ ಶ್ರಮ ಅಪಾರವಾಗಿದೆಯೆಂದರೆ ಅತಿಶಯೋಕ್ತಿಯಾಗಲಾರದು. NIPM ಹುಬ್ಬಳ್ಳಿ ವಿಭಾಗವನ್ನು ಉತ್ತರ ಕರ್ನಾಟಕ NIPM ಆಗಿ ಮಾಡುವಲ್ಲಿ ಇವರ ಕೊಡುಗೆ ಅನನ್ಯ. ಶ್ರೀಯುತರು NIPM ಉತ್ತರ ಕರ್ನಾಟಕ ಸಂಸ್ಥೆಯ ಸದಸ್ಯರಾಗಿದ್ದು ಪ್ರಸ್ತುತ ಕರ್ನಾಟಕ chapter ನ ಆಜೀವ ಸದಸ್ಯರಾಗಿರುತ್ತಾರೆ. ನಿವೃತ್ತಿಯ ನಂತರ ತಮ್ಮ ಸ್ವಕ್ಷೇತ್ರ ದಾವಣಗೆರೆಯಲ್ಲಿ ನೆಲೆಸಿರುವ ಶ್ರೀಯುತರು ದಾವಣಗೆರೆ ಸಕ್ಕರೆ ಕಂಪನಿಯಲ್ಲಿ ಮಾನವ ಸಂಪನ್ಮೂಲ ಮತ್ತು ಆಡಳಿತ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಪ್ರಥಮ ರಾಜ್ಯಮಟ್ಟದ ಮಾನವ ಸಂಪನ್ಮೂಲ ವೃತ್ತಿನಿರತರ ಕನ್ನಡ ಸಮ್ಮೇಳನ 2017 ರಲ್ಲಿ ಶ್ರೀಯುತ ಎಂ.ಎಸ್. ರವೀಶ್‌ರವರು ಮಾನವ ಸಂಪನ್ಮೂಲ ಕ್ಷೇತ್ರಕ್ಕೆ ಸಲ್ಲಿಸಿರುವ ಅಸಾಧಾರಣ ಸೇವೆ ಮತ್ತು ಕೊಡುಗೆಗಳನ್ನು ಗುರುತಿಸಿ, ಈ ಸನ್ಮಾನವನ್ನು ನೀಡುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಚಾರ. ದೇವರು, ಅವರಿಗೆ ಮತ್ತು ಅವರ ಕುಟುಂಬದವರಿಗೆ ಆರೋಗ್ಯ ಮತ್ತು ಐಶ್ವರ್ಯವನ್ನು ನೀಡಿ ಸದಾಕಾಲ ಸುಖವಾಗಿ ಇರಲಿ ಎಂದು ಎಲ್ಲಾ ಮಾನವ ಸಂಪನ್ಮೂಲ ವೃತ್ತಿನಿರತ ಪರವಾಗಿ, ನಾವು ಆಶಿಸುತ್ತೇವೆ.

**ಕನ್ನಡ ಬಳಸಿ, ಕಲಿಸಿ ಮತ್ತು ಉಳಿಸಿ.**

**ರಮೇಶ ಎಂ.ಎಚ್.**
ನಿರಾತಂಕ ಸಂಸ್ಥಾಪಕ ಕಾರ್ಯದರ್ಶಿ

**ಡಾ. ಕೋದಂಡರಾಮ**
ಮುಖ್ಯಸ್ಥರು, ಸಮಾಜಕಾರ್ಯ ವಿಭಾಗ,
ಬೆಂಗಳೂರು ವಿಶ್ವವಿದ್ಯಾನಿಲಯ

**ಕಾರ್ಯಕಾರಿ ಸಮಿತಿ ಮತ್ತು ಆಯೋಜಕರ ಸಹಕಾರದೊಂದಿಗೆ**